# ಬೆಳ್ಳಂದೂರು ಮಾಲಿನ್ಯ ಸರಕಾರಕ್ಕೆ 50 ಕೋಟಿ ದಂಡ

## ಬಿಬಿಎಂಪಿಗೆ 25 ಕೋಟಿ ಫೈನ್ ಹಾಕಿದ ಎನ್‌ಜಿಟಿ

**ಹೊಸದಿಲ್ಲಿ:** ರಾಜಧಾನಿಯನ್ನು ಕಾಡುತ್ತಿರುವ ಬೆಳ್ಳಂದೂರು ಕೆರೆ ಮಾಲಿನ್ಯಕ್ಕೆ ಸಂಬಂಧಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಗುರುವಾರ ರಾಜ್ಯ ಸರಕಾರ ಮತ್ತು ಬಿಬಿಎಂಪಿಗೆ ಬಲವಾದ ಚಾಟಿ ಬೀಸಿದೆ.

ಪದೇಪದೆ ಸೂಚನೆ ನೀಡಿದರೂ ಮಾಲಿನ್ಯ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳದ ರಾಜ್ಯ ಸರಕಾರಕ್ಕೆ 50 ಕೋಟಿ ಮತ್ತು ಬಿಬಿಎಂಪಿಗೆ 25 ಕೋಟಿ ರೂ. ದಂಡ ವಿಧಿಸಿದೆ. ಕೆರೆ ಪುನಶ್ಚೇತನಕ್ಕೆ ತಕ್ಷಣವೇ ಕೆಲಸ ಆರಂಭಿಸಬೇಕು ಎಂದು ಕಟ್ಟಾಜ್ಞೆ ವಿಧಿಸಿರುವ ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್ ಅವರು ಮೇಲ್ವಿಚಾರಣೆಗೆ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ನೇತೃತ್ವದ ಸಮಿತಿಯನ್ನು ನೇಮಿಸಿದ್ದಾರೆ.

ಹಸಿರು ಪೀಠ ಈ ಬಾರಿ ಕಠಿಣ ತೀರ್ಮಾನಗಳನ್ನು ಪ್ರಕಟಿಸಿರುವುದರಿಂದ ಇದೇ ಮೊದಲ ಬಾರಿಗೆ ಕೆರೆ ಪುನಶ್ಚೇತನದ ಆಶಾವಾದ ಕಾಣಿಸಿಕೊಂಡಿದೆ. »13

### ಕೆರೆಯಲ್ಲಿ ಕೇಬಲ್ ವೈರ್ ಸುಟ್ಟ ನಾಲ್ವರ ಬಂಧನ

»ನಮ್ಮ ಬೆಂಗಳೂರು



### 500 ಕೋಟಿ ಎಸ್ಕ್ರೋ ನಿಧಿ

ಬೆಳ್ಳಂದೂರು ಕೆರೆ ಸ್ವಚ್ಛತಾ ಕಾರ್ಯ ಯೋಜನೆಯ ಅನುಷ್ಠಾನಕ್ಕೆ 500 ಕೋಟಿ ಮೀಸಲು ನಿಧಿಯನ್ನು ಕಾದಿರಿಸುವಂತೆ ಎನ್‌ಜಿಟಿ ಸೂಚನೆ ನೀಡಿದೆ. ತಪ್ಪಿದಲ್ಲಿ 100 ಕೋಟಿ ರೂ. ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡಿದೆ.

### ಮೇಲ್ವಿಚಾರಣೆಗೆ ಸಮಿತಿ

ಕೆರೆ ಪುನಶ್ಚೇತನ ಕಾರ್ಯದ ಮೇಲ್ವಿಚಾರಣೆಯನ್ನು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮತ್ತು ಖ್ಯಾತ ವಿಜ್ಞಾನಿ ಟಿ.ವಿ. ರಾಮಚಂದ್ರನ್ ನೇತೃತ್ವದ ಸಮಿತಿ ನೋಡಿಕೊಳ್ಳಲಿದೆ ಎಂದು ಪೀಠ ಸೂಚಿಸಿದೆ. ನಾಗರಿಕರ ದೂರು ಮತ್ತು ಸಲಹೆ ಪಡೆಯಲು ವೆಬ್‌ಸೈಟ್ ಆರಂಭಿಸಲು ಸೂಚನೆ ನೀಡಿದೆ.

### ತಿಂಗಳಲ್ಲಿ ವರದಿ ಕೊಡಿ

ಕೆರೆ ಪುನಶ್ಚೇತನಕ್ಕೆ ಕೈಗೊಳ್ಳುವ ಕ್ರಮಗಳ ಕ್ರಮಾಗತ ವಿವರಗಳನ್ನು ಒಂದು ತಿಂಗಳೊಳಗೆ ಸಲ್ಲಿಸುವಂತೆಯೂ ಕೋರ್ಟ್ ಆದೇಶಿಸಿದೆ.